ಬೇಕೆಂದು ಕೇಳಿದ್ದಾರೆ. ಲೆವೆರ್ ಕ್ಯಾಸಿಂಗ್ ಇರಬೇಕು, ಅಂಡರ್ ಬ್ರಿಡ್ ಸಹ ಆಗಬೇಕು ಎನ್ನುವ ವಾದವನ್ನು ಮಾಡಿಕೊಂಡು ಕುಳಿತುಕೊಂಡ ಕಾರಣದಿಂದ ಇಲ್ಲಿಯವರೆಗೂ ಕಾರ್ಯಗತವಾಗಲಿಲ್ಲ. ಈಗ 50 ಪರ್ಸೆಂಟ್ ಖರ್ಚನ್ನು ಕೊಡುವುದಕ್ಕೆ ಮುನಿಸಿಪಾಲಿಟಿಯವರು ಒಪ್ಪಿದ್ದಾರೆ. ಇನ್ನು ಮೇರೆ ನೂಕ್ ಕ್ರಮ ತೆಗೆದುಕೊಳ್ಳುತ್ತೇವೆ.

Revision of Land Revenue

235. Sri A. H. SHIVANANDASWAMY (Elected by L. A.).—

Will the Minister for Revenue be pleased to state :—

(*a*) whether the revision of land revenue is taking place in various districts on receipt of complaints ;

(*b*) the number of districts and taluks that are subjected to such revision ;

(*c*) the nature of complaints and their stage of disposal ?

Sri H. V. KOUJALGI (Minister for Revenue).—

(*a*) Provision has been made under Section 122 B of the Mysore Land Revenue Act enabling the Deputy Commissioners to pass order varying assessments after considering the objections preferred by the parties in response to the notices issued under Section 122 A of the Mysore Land Revenue Act. The orders can be passed only after notices are served and objections are preferred.

(*b*) Government have not yet notified where fresh revision settlement will be held by virtue the provision under Section 114 A of the Mysore Land Revenue Act.

(*c*) This information can be given only after the notices are served and objections preferred are considered by the Deputy Commissioners.

ಶ್ರೀ ಎ. ಎಚ್. ಶಿವಾನಂದಸ್ವಾಮಿ.— ಭೂ ಕಂದಾಯವನ್ನು ಪುನರ್ವಿಮರ್ಶೆ ಮಾಡುತ್ತೇವೆಂದು ಈ ಸದನದಲ್ಲಿ ಹೇಳಿದ್ದಾರೆ. ಅದರ ಪ್ರಕಾರ ಎಷ್ಟು ಅರ್ಜಿಗಳು ಬಂದಿವೆ, ಯಾವ ಯಾವ ಜಿಲ್ಲೆಯಿಂದ, ಯಾವ ಯಾವ ತಾಲ್ಲೂಕಿನಿಂದ ಬಂದಿವೆ ಎಂದು ಕೇಳಿದರೆ ಅದಕ್ಕೆ ಸರಿಯಾದ ಉತ್ತರವನ್ನು ಕೊಟ್ಟಿಲ್ಲ. ಯಾವ ಯಾವ ಜಿಲ್ಲೆ ಮತ್ತು ತಾಲ್ಲೂಕುಗಳಿಂದ ಕಂದಾಯದ ಪುನರ್ವಿಮರ್ಶೆ ಮಾಡಬೇಕೆಂದು ಅರ್ಜಿಗಳು ಬಂದಿವೆ ಎನ್ನುವುದನ್ನು ಈಗಲಾದರೂ ದಯವಿಟ್ಟು ತಿಳಿಸುತ್ತಾರೆಯೇ ?

ಶ್ರೀ ಎಚ್. ವಿ. ಕೌಜಲಗಿ.—ಸೆಕ್ಷನ್ಸ್ 122 ಮತ್ತು 1114 ಪ್ರಕಾರ ಪ್ರತಿಯೊಬ್ಬ ಹೋಲ್ಡರಿಗೂ ನೋಟೀಸ್ ಕೊಡಬೇಕಾಗುತ್ತದೆ. ನೋಟೀಸ್ ಕೊಟ್ಟನಂತರ ಅವರ ಆಕ್ಷೇಪಣೆಗಳು ಏನಾದರೂ ಇದ್ದರೆ ಬರುತ್ತದೆ. ಈ ಮುಂಚಿತವಾಗಿ ಹೇಳಿದಂತೆ ನೋಟೀಸ್ ಇನ್ನೂ ಕೊಟ್ಟಿಲ್ಲ. ನೋಟೀಸ್ ಫಾರಂ ವಗೈರೆ ಎಲ್ಲ ಪ್ರಿಂಟ್‌ಆಗಿ ಸಂಬಂಧಿಸಿದ ಅಧಿಕಾರಿಗಳ ಕಡೆಗೆ ಹೋಗಿವೆ. ನೋಟೀಸ್ ಕೊಟ್ಟು ನಂತರ ಎಷ್ಟು ತಕರಾರುಗಳು ಬರುತ್ತವೆ ಎಂದು ಹೇಳಬಹುದು.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ನೋಟೀಸ್ ಕೊಡುತ್ತೀರಲ್ಲ, ಪುನರ್ವಿಮರ್ಶಿತ ಕಂದಾಯವನ್ನು 1965ನೇ ಇಸವಿಯಿಂದ ಜಾರಿಗೆ ಕೊಡುತ್ತೀರೋ ಅಥವಾ ನೋಟೀಸ್ ಕೊಟ್ಟ ವರ್ಷಕ್ಕೆ ಅದು ರಿವಿಜನ್ ಆಗುತ್ತದೆಯೋ ?

ಶ್ರೀ ಎಚ್. ವಿ. ಕೌಜಲಗಿ.—1964-65 ರಲ್ಲಿ ರೀಸೆಟಲ್‌ಮೆಂಟ್ ಆಗಿದೆ. ನೋಟೀಸ್ ಕೊಟ್ಟ ನಂತರ ಏನಾದರೂ ಹೆಚ್ಚು ಕಡಮೆಯಾದರೆ ಆ ತಾರೀಖಿಗೆ ಬರುತ್ತದೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಪ್ರತಿಯೊಬ್ಬ ಪಟ್ಟಾದಾರರಿಗೂ ಭೂಕಂದಾಯ ವ್ಯತ್ಯಾಸವಾಗಿರುವುದರ ಬಗ್ಗೆ ನೋಟೀಸ್ ಕೊಡುವುದರಲ್ಲಿ ಸರ್ವೆಸೆಟಲ್‌ಮೆಂಟ್ ಕಾಲಕ್ಕೆ ಮಾಡಿದ ಹಾಗೆ ಗೆಜೆಟಿನಲ್ಲಿ ಪ್ರಕಟಣೆ ಮಾಡಲಾಗುವುದೇ ಹೇಗೆ ?

ಶ್ರೀ ಎಚ್. ವಿ. ಕೌಜಲಗಿ.—ಈ ತಿದ್ದುಪಡಿ ಕಾಯಿದೆ ಮಾನ್ಯ ಮನೆಯಲ್ಲಿ ಬಂದಾಗ ಹೇಳಿದ್ದೇನೆ, ಸುಪ್ರೀಂಕೋರ್ಟ್ ತೀರ್ಮಾನದ ಪ್ರಕಾರ ಪ್ರತಿಯೊಬ್ಬರಿಗೂ ನೋಟೀಸ್ ಕೊಡಬೇಕಾಗುತ್ತದೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ನೋಟೀಸ್ ಕೊಟ್ಟಾಗ ಪ್ರತಿಯೊಬ್ಬರಿಂದಲೂ ಸಹಿ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ನೋಟೀಸ್ ಯಾವರೀತಿ ಕೊಡಬೇಕು ಎನ್ನುವುದು ಲ್ಯಾಂಡ್ ರೆವೆನ್ಯೂ ಕೋಡಿನಲ್ಲಿದೆ ಆ ಪ್ರಕಾರ ಕೊಡುತ್ತೇವೆ.

4-00 P.M.

ಶ್ರೀ ಎ. ಕೆ. ಸುಬ್ಬಯ್ಯ.— ನೋಟೀಸನ್ನು ಎಲ್ಲಾ ಜಿಲ್ಲೆಗಳವರಿಗೂ ಕೊಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಪ್ರತಿಯೊಬ್ಬರಿಗೂ ಕೊಡುತ್ತೇವೆ.

ಶ್ರೀ ಎ. ಕೆ. ಸುಬ್ಬಯ್ಯ.—ಕೊಡಗಿನ ಬಗ್ಗೆ ಕಾನೂನು ಆಗಿಲ್ಲವೇ ?

ಶ್ರೀ ಎಚ್. ವಿ ಕೌಜಲಗಿ.— 114 ನೇ ಕಲಮಿನ ಪ್ರಕಾರ ಸರಕಾರಕ್ಕೆ ಎಲ್ಲಿ ಅನ್ಯಾಯವಾಗಿದೆಯೆಂದು ಕಂಡುಬರುವುದೋ ಅಲ್ಲಿ ರೀಸೆಟ್ಲ್‌ಮೆಂಟ್ ಇಂಪ್ರೊಡ್ಯೂಸ್ ಮಾಡಿ ರೀಓಪನ್ ಮಾಡಿ ನೋಟೀಸ್ ಕೊಡಲಾಗುವುದು. ಮತ್ತು 172 ನೆಯ ಕಲಮಿನ ಪ್ರಕಾರ ಪ್ರತಿಯೊಬ್ಬರಿಗೂ ಡಿ. ಸಿ. ಕೊಡುವರು.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಪುನಃ ಭೂ ಕಂದಾಯದ ರಿವಿಷನ್ ಮಾಡಬೇಕು, ಅನ್ಯಾಯವಾಗಿದೆ ಎಂದು ಅಪಾದನೆ ಬಾರವಿರುವ ಹಾಗೆ ಲ್ಯಾಂಡ್ ರೆವೆನ್ಯೂ ಆಕ್ಟ್ ಪ್ರಕಾರ ಅಥವಾ ಲ್ಯಾಂಡ್ ರೆವೆನ್ಯೂ ಕೋಡ್ ಪ್ರಕಾರ ನೋಟೀಸು ಕೊಡುವಾಗ ಆಯಾ ಪಟ್ಟಾದಾರರ ಸಹಿ ತೆಗೆದುಕೊಳ್ಳುವಂತೆ ತಿಳಿಸುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ನೋಟೀಸು ಕೊಡಬೇಕಾದರೆ ಸಹಿ ತೆಗೆದುಕೊಳ್ಳಬೇಕು ಮನೆಯಲ್ಲಿ ಯಾರೂ ಇಲ್ಲದಿದ್ದರೆ ಬಾಗಿಲಿಗೆ ನೋಟೀಸನ್ನು ಹಚ್ಚಬೇಕು. ದೊಡ್ಡವರು ಯಾರ ಮನೆಯಲ್ಲಿ ಹಾಜರಿರುವರೋ ಅವರಿಗೆ ಕೊಡಬೇಕು ಎಂದಿದೆ. ಆ ಪ್ರಕಾರ ಮಾಡುತ್ತಾರೆ.

ಉಪಸಭಾಪತಿಯವರು.—ಪ್ರಶ್ನೋತ್ತರಗಳ ಕಾಲ ಮುಗಿಯಿತು. ಈಗ ಸಭೆ ಎದ್ದು ಮತ್ತೆ ನಾಲ್ಕೂವರೆಗಂಟೆಗೆ ಸೇರುವುದು.

The House rose for Tea at Three Minutes past Four of the Clock and reassembled at Thirty-five Minutes past Four of the Clock.

[MR. DEPUTY CHAIRMAN in the Chair]

Replies to Questions to be expedited by Government

ಶ್ರೀ ಬಿ. ಚನ್ನಬ್ಯೆರೇ ಗೌಡ.—ನನ್ನ ಪ್ರಶ್ನೆ 28 ನೇ ತಾರೀಖು ಒಂದು ಷಾರ್ಟ್‌ನೋಟೀಸ್ ಪ್ರಶ್ನೆ ಕೊಟ್ಟಿದ್ದೆ ಇದುವರೆಗೂ ಉತ್ತರ ಬರಲಿಲ್ಲ. ಅದೇ ರೀತಿ ಇನ್ನೂ ಅನೇಕ ಪ್ರಶ್ನೆಗಳಿಗೆ ಉತ್ತರ

ಬರಲಿಲ್ಲ. ಅಲ್ಪಕಾಲಾವಧಿ ಪ್ರಶ್ನೆ ಬೆಂಗಳೂರು ನಗರದಲ್ಲಿ ಮಾರ್ಕೆಟ್ ಹತ್ತಿರ ಇರುವ ಸಬ್‌ವೇಗೆ ಸಂಬಂಧಪಟ್ಟದ್ದಾಗಿದೆ, ಈ ರೀತಿ ಆದರೆ ಏನು ಮಾಡುವುದು ?

ಉಪಸಭಾಪತಿಯವರು.—ತಾವು ಹೇಳಿತಕ್ಕ ವಿಚಾರಗಳನ್ನು ಸರ್ಕಾರದವರಿಗೆ ಆಗಾಗ್ಯೆ ತಿಳಿಸುತ್ತಾ ಇದ್ದೇವೆ.

ಶ್ರೀ ಬಿ. ಚನ್ನಬ್ಯೆರೇ ಗೌಡ.—ಉತ್ತರ ಬಂದರೆ ಒಳ್ಳೆಯದು. ಎರಿಕ್ಷಿಸಿಟಿ ಬೋರ್ಡಿನ ಮೇರೆ ಅರ್ಧಗಂಟೆ ಕಾಲ ಚರ್ಚೆಗೆ ಅವಕಾಶ ಕೇಳಿದ್ದೆ ಅದೂ ಬರಲಿಲ್ಲ ಮತ್ತು, ಕಾವೇರಿ ಬೇಸಿನ್‌ನಲ್ಲಿ ಆಗಬೇಕಾದ ಕಾಂಗಾರಿಗಳ ವಿಷಯ ಇದೆ, ಅದರ ಚರ್ಚೆ ಯಾವಾಗ ಬರುತ್ತದೆ ?

Debate on the sharing of the Cauvery Waters—Permission for allowance

Sri C. S. BALAKRISHNA GOWDA.—To-day I have given notice of a special resolution regarding Cauvery waters. It is a very important matter affecting millions of people. The four districts in that basin will be affected if proper steps are not taken with regard to this matter. Therefore, kindly allow us to have a free and frank discussion on this subject.

ಉಪಸಭಾಪತಿಯವರು.—ಈ ವಿಚಾರಗಳೆಲ್ಲಾ ಬಹಳ ಪ್ರಾಮುಖ್ಯವಾದುವು. ಆದರೆ ಕಾಲಾವಕಾಶವಿಲ್ಲ. ಇವತ್ತು ನಾಳೆ ಬಹಳ ಕೆಲಸ ಇದೆ, ವಿರೋಧಪಕ್ಷದ ಸದಸ್ಯರು ಮತ್ತು ಇತರ ಮಾನ್ಯ ಸದಸ್ಯರೆಲ್ಲರೂ ಸಹಕರಿಸಿ ಆದಷ್ಟು ಬೇಗ ಅಫಿಷಿಯಲ್ ಬಿಸಿನೆಸ್ ಎಲ್ಲವನ್ನೂ ಮುಗಿಸಿದರೆ ಯೋಚನೆ ಮಾಡಬಹುದು. The Hon. Leader of the House is requested to consider whether this subject can be taken up at any time to-day or at least tomorrow. The Chair is requesting the Leader of the House to consider this matter.

ಶ್ರೀ ಜಿ. ವಿ. ಅಂಜನಪ್ಪ.—ವಿರೋಧ ಪಕ್ಷದವರು ಯಾವಾಗಲೂ ಸಹಕರಿಸುತ್ತಾ ಇದ್ದಾರೆ. ಅದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಕಾವೇರಿ ವ್ಯಾಲಯಲ್ಲಿ ಆಗಬೇಕಾದ ಪ್ರಾಜೆಕ್ಟುಗಳ ವಿಷಯವಾಗಿ ಮಾತನಾಡಬೇಕೆಂದಿರುವವರು ಅಲ್ಲಿಂದ ಬಂದಿರತಕ್ಕ ಅನೇಕ ಜನ ಸದಸ್ಯರು ಇರುವ ಪ್ರಯುಕ್ತ ಸಮಯ ಒದಗಿಸಲು ಸಭಾನಾಯಕರು ಒಪ್ಪಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ವಿ. ಶಂಕರಗೌಡ.—ಆಗಲೇ ಹೇಳಿದ್ದೇನೆ, ನಾಳೆ ನಮ್ಮ ಮುಂದೆ ಇರತಕ್ಕ ಎಲ್ಲಾ ಬಿಸಿನೆಸ್ಸನ್ನೂ ಮುಗಿಸಿ ಉಳಿದ ವೇಳೆಯನ್ನು ಅದಕ್ಕೆ ಕೊಡಬಹುದು.

ಶ್ರೀ ಎಂ. ಟಿ. ಶ್ರೀಕಂಠಯ್ಯ.—ಮಂಗಳವಾರ ದಿವಸವೂ ಕೂಡ ಸೇರಿ ಈ ಕೆಲಸಕಾರ್ಯಗಳನ್ನೆಲ್ಲಾ ಮುಗಿಸಬಹುದು.

ಶ್ರೀ ಸಿ. ಎಸ್ ಬಾಲಕೃಷ್ಣ ಗೌಡ.—ನಾಳೆ ಮುಗಿಸಬೇಕೆಂದು ಇದ್ದೀರಿ, ಒಪ್ಪೋಣ. ಅನಂತರ ಮೂರ ದಿವಸ ರಜಬರುತ್ತದೆ. ಆದ್ದರಿಂದ ಕೊನೇ ಪಕ್ಷ ನಾಳೆ ಬೆಳಿಗ್ಗೆ ಮತ್ತು ಸಾಯಂಕಾಲ ಎರಡು ಹೊತ್ತೂ ಕುಳಿತುಕೊಂಡು ಈ ವಿಚಾರವನ್ನು ಚರ್ಚೆ ಮಾಡಬಹುದು, ಎಷ್ಟೇ ತೊಂದರೆ ಇದ್ದರೂ ಇಂತಹ ಗಹನವಾದ ವಿಷಯದಲ್ಲಿ ಬೆಳಿಗ್ಗೆ ಮಧ್ಯಾನ್ನ ಕುಳಿತುಕೊಂಡು ಚರ್ಚೆ ಮಾಡುವುದು ಒಳ್ಳೆಯದು.

ಉಪಸಭಾಪತಿಯವರು.—ಮಾನ್ಯ ಸಭಾನಾಯಕರು ಒಪ್ಪಿಕೊಂಡಿರುವುದು ಬಹಳ ಮೆಚ್ಚತಕ್ಕ ವಿಚಾರ. ಅಜೆಂಡಾದಲ್ಲಿರತಕ್ಕ ಎಲ್ಲಾ ವಿಷಯಗಳನ್ನೂ ಆದಷ್ಟು ಬೇಗ ಮುಗಿಸಬೇಕು. ನಂತರ ನಾಳೆ ಬೆಳಿಗ್ಗೆ ಎಂಟೂವರೆ ಗಂಟೆಯಿಂದ ಮಧ್ಯಾಹ್ನ ಒಂದೂವರೆ ಗಂಟೆವರೆಗೆ ಅಥವಾ ಎರಡು ಗಂಟೆಯವರೆಗಾದರೂ ಕುಳಿತು ಈ ವಿಷಯವನ್ನು ಚರ್ಚೆ ಮಾಡಬಹುದು ಎಂದು ಕಾಣುತ್ತದೆ.